## ಶಿಕ್ಷಕರಿಗಾಗಿ ಅನುದಾನ

ಈ ಕಾರ್ಯಕ್ರಮದ ಉದ್ದೇಶ ಏನಂದರೆ ಕರ್ನಾಟಕದ ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರನ್ನು ಪ್ರೋತ್ಸಾಹಿಸುವುದು ಮತ್ತು ಆ ಮೂಲಕ ಶಿಕ್ಷಕರು ವಿಷಯ ಬೋಧನೆಯ ಆಚೆಗೆ ಕಲಾ ಶಿಕ್ಷಣದ ಸಾಧ್ಯತೆಗಳನ್ನು ವಿಸ್ತರಿಸುವುದು. ಶಾಲಾ ಸಮುದಾಯದಲ್ಲಿ ಶಿಕ್ಷಕರನ್ನು ಕಲಾವಿದರನ್ನು ಸಹಭಾಗಿಗಳನ್ನಾಗಿಸುವ ಅವಕಾಶಗಳನ್ನು ಸೃಷ್ಟಿಸುವುದು. ಮತ್ತು ಕಲಾತ್ಮಕ ಪ್ರಯೋಗಗಳಿಂದ ತರಗತಿ ಬೋಧನೆಯನ್ನು ಮತ್ತು ಪಠ್ಯಕ್ರಮವನ್ನು ಮತ್ತಷ್ಟು ಶ್ರೀಮಂತಗೊಳಿಸುವುದು.

ಕಳೆದ ಮೂರು ವರ್ಷಗಳಲ್ಲಿ ಐ ಎಫ್ ಎ ೨೦ ಶಿಕ್ಷಕರ ಯೋಜನೆಗಳಿಗೆ ಅನುದಾನ ನೀಡಿದೆ. ಸರ್ಕಾರಿ ಶಾಲೆಗಳಲ್ಲಿನ ಸನ್ನಿವೇಶದಲ್ಲಿ ಕಲಾ ಶಿಕ್ಷಣವು ಕ್ಷೇತ್ರಾಧಾರಿತ ಸೃಜನಶೀಲ ಪ್ರಯತ್ನಗಳ ಮೂಲಕ ರೂಪುಗೊಳ್ಳಲು ಅನುದಾನ ಸಹಕಾರಿಯಾಗಿದೆ. ಅಷ್ಟೇ ಅಲ್ಲದೆ ಸಮುದಾಯ ಮತ್ತು ಶಾಲಾ ಪರಿಸರದ ಶೈಕ್ಷಣಿಕ ಸಂಬಂಧ ಹೆಚ್ಚು ಸತ್ವಯುತಗೊಳ್ಳಲು ಈ ಅನುದಾನ ನೆರವಾಗಿದೆ. ಈ ಯೋಜನೆಗಳು ಕಲೆಯ ಹಲವು ಮಾದರಿಗಳನ್ನು ರೂಪಗಳನ್ನು ಆಧರಿಸಿದೆ. ಅವು ದೃಶ್ಯಕಲೆ, ಪ್ರದರ್ಶನ ಕಲೆ, ಸಾಹಿತ್ಯ, ಪತ್ರಿಕೋದ್ಯಮ, ಅಭಿವ್ಯಕ್ತಿ, ದಾಖಲೀಕರಣ, ಕಥನ ಕಲೆ, ವಿನ್ಯಾಸ, ಗಣಿತ, ವಿಜ್ಞಾನ, ಕಾವ್ಯ, ಬೊಂಬೆ ಕಲೆ, ಅನುವಾದಗಳು, ಪರಿಸರ ಕಾಳಜಿಗಳು ಮತ್ತು ಜಾನಪದ ಸಂಸ್ಕೃತಿಗಳ ಮರು ಪರಿಚಯ.

## ಆಯ್ಕೆವಿಧಾನ

ಪ್ರತಿ ವರ್ಷದ ಮೇ-ಜೂನ್ ಹಾಗೂ ಸೆಪ್ಟೆಂಬರ್-ಅಕ್ಟೋಬರ್ ಅವಧಿಯಲ್ಲಿ ಕರ್ನಾಟಕದ ಸರ್ಕಾರಿ ಶಾಲಾ ಶಿಕ್ಷಕರಿಂದ ಯೋಜನೆಗಳನ್ನು ಆಹ್ವಾನಿಸಲಾಗುತ್ತದೆ. ಶಿಕ್ಷಕರ, ಸ್ಥಳೀಯ ಕಲಾವಿದರ ಮತ್ತು ಶಾಲಾ ಸಮುದಾಯದ ನಡುವೆ ಸಹಯೋಗವನ್ನು ಗಟ್ಟಿಗೊಳಿಸಲು ಐ ಎಫ್ ಎ ಸಂಸ್ಥೆಯು ಕಲಿ ಕಲಿಸು ಯೋಜನೆಯ ಮುಖಾಂತರ ಪ್ರಸ್ತಾವನೆಗಳನ್ನು ಸ್ವೀಕರಿಸಲಾಗುತ್ತದೆ.

ಅರ್ಜಿ ವಿಧಾನಗಳ ಕುರಿತು ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ಇ-ಮೇಲ್ ಮಾಡಿ :

ಕೃಷ್ಣಮೂರ್ತಿ ಟಿ ಎನ್, ಕಾರ್ಯಕ್ರಮ ನಿರ್ವಹಣಾಧಿಕಾರಿ, ಕಲಾ ಶಿಕ್ಷಣ - krishna@indiaifa.org

ರಾಧಿಕಾ ಭಾರದ್ವಾಜ್, ಸಹ ಕಾರ್ಯಕ್ರಮ ನಿರ್ವಹಣಾಧಿಕಾರಿ,ಕಲಾ ಶಿಕ್ಷಣ - radhika@indiaifa.org